## ಬೇಗ ಮುಗಿಸಿ

ಝೀ ಕನ್ನಡದ ‘ಜೊತೆ ಜೊತೆಯಲಿ’ ಒಬ್ಬ ಮಧ್ಯಮ ವಯಸ್ಸಿನ ದೊಡ್ಡ ಶ್ರೀಮಂತ ವ್ಯಾಪಾರಿ ಮತ್ತು ಇಪ್ಪತ್ತು ವರ್ಷದ ಯುವತಿಯ ನಡುವೆ ನಡೆಯುವ ಪ್ರೇಮಕಥನ. ಈಗ ವ್ಯಾಪಾರಿ ಆರ್ಯವರ್ಧನ್ ಪಾತ್ರವನ್ನು ವಿಶ್ವಾಸ್ ದೇಸಾಯಿ ನಿರ್ವಹಿಸುತ್ತಿದ್ದಾರೆ. ಇವರಿಬ್ಬರ ನಡುವಿನ ವಯಸ್ಸಿನ ಅಂತರ ಮೇಲುನೋಟಕ್ಕೆ ಗೋಚರಿಸುವುದಿಲ್ಲ. ಕಥೆ ಭಿನ್ನ ಅನ್ನಿಸುವುದೇ ವಯಸ್ಸಿನ ಅಂತರದಿಂದ. ಆ ಅಂಶವೇ ಮರೆಯಾಗಿರುವುದರಿಂದ ಧಾರಾವಾಹಿ ದಿಕ್ಕು ತಪ್ಪಿದಂತೆ ಆಗಿದೆ. ದಯವಿಟ್ಟು ಬೇಗ ಮುಗಿಸಿ.

—ವಸಂತಿ ಪಾರಂಪಳ್ಳಿ

## ಉತ್ತಮ ಸಂದೇಶ

ಕಲರ್ಸ್ ಕನ್ನಡದ ‘ಕನ್ನಡತಿ’ಯಲ್ಲಿ ಸುದ್ದಿ ವಾಹಿನಿಯ ನಿರೂಪಕಿಯನ್ನು ಭುವಿ ತರಾಟೆಗೆ ತೆಗೆದುಕೊಂಡರು. ಮನೆಯೊಳಗೆ ನಡೆಯುವ ಘಟನೆಗಳನ್ನು ಚಿತ್ರೀಕರಿಸುವುದು; ಅದೂ ಅನುಮತಿಯಿಲ್ಲದೆ ಚಿತ್ರೀಕರಣ ಮಾಡುವುದು ಕಾನೂನುಬಾಹಿರ ಎನ್ನುವ ವಿಷಯವನ್ನು ನಿರೂಪಿಸಿದರು. ಇದು ಸಮಾಜಕ್ಕೆ ನೀಡಿದ ಒಳ್ಳೆಯ ಸಂದೇಶ.

—ಶಾಂತ ಕುಮಾರ್, ಸರ್ಜಾಪುರ

## ನಿತ್ಯವೂ ‘ದಾಸ...’ ದರ್ಶನವಾಗಲಿ

ಕಲರ್ಸ್ ಕನ್ನಡದಲ್ಲಿ ಪ್ರತಿ ಸಾಯಂಕಾಲ ಪ್ರಸಾರವಾಗುತ್ತಿದ್ದ ‘ದಾಸ ಪುರಂದರ’ ಧಾರಾವಾಹಿಯನ್ನು ಮನೆ ಮಂದಿ ಕುಳಿತು ತಪ್ಪದೆ ನೋಡುತ್ತಿದ್ದೆವು. ಈಚೆಗೆ ಇದನ್ನು ವಾರಾಂತ್ಯಕ್ಕೆ ಬದಲಿಸಿದ್ದು ಬೇಸರ ತಂದಿದೆ. ಉತ್ತಮ ಕಥೆ, ಸಂಕಲನ, ನೈಜತೆಗೆ ಹತ್ತಿರವಾಗುವಂತೆ ಚಿತ್ರೀಕರಣ ಮಾಡಿದ್ದಾರೆ. ಇದು ಒಳ್ಳೆಯ ನೀತಿಯನ್ನು ಬೋಧನೆ ಮಾಡುವಂತಿದೆ. ಇದನ್ನು ಮತ್ತೆ ಪ್ರತಿದಿನ ಪ್ರಸಾರ ಮಾಡಬೇಕೆಂದು ವಾಹಿನಿಯವರಲ್ಲಿ ವಿನಂತಿಸುತ್ತೇನೆ.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ದಿಕ್ಕಿಲ್ಲದ ತನಿಖೆ

ಸಿರಿ ಕನ್ನಡದ ‘ಯುಗಾಂತರ’ದಲ್ಲಿ ಇತ್ತೀಚಿನ ಸಂಚಿಕೆಗಳ ಕೆಲವು ಸನ್ನಿವೇಶಗಳು: ಗೆಸ್ಟ್ ಹೌಸ್‌ಗೆ ಶಾರದಾ ಪ್ರಸಾದ್ ಹಾಗೂ ಉಸ್ತುವಾರಿ ಮಂತ್ರಿ ಬರುವುದು. ಸುದ್ದಿ ಗೊತ್ತಾದ ತಕ್ಷಣ ಸದಾಶಿವರಾಯರ ಜೊತೆ ಜಿಲ್ಲಾಧಿಕಾರಿಗೆ ಅನುಮಾನ ಬಂದು ಸದಾಶಿವ ರಾಯರ ಜೊತೆ ಮನೆಗೆ ಬರುತ್ತಾರೆ. ಅವರು ಬೇರೆಲ್ಲೂ ಹುಡುಕದೆ ಬಟ್ಟೆ ಇಡುವ ಬೀರುವಿನಲ್ಲಿ ಕೈ ಹಾಕಿ ಹಣದ ಚೀಲ ತೆಗೆದಿಡುತ್ತಾರೆ. ಆದಾಯ ಅಧಿಕಾರಿಗಳಿಗೆ ಮನೆಯ ಶೋಧಕ್ಕೆ ಆದೇಶಿಸುತ್ತಾರೆ. ಏನು ಸಿಗದಿದ್ದಾಗ ಜಿಲ್ಲಾಧಿಕಾರಿ ಒಬ್ಬರಿಗೆ ಕಪಾಳಕ್ಕೆ ಹೊಡೆಯುತ್ತಾರೆ. ಇನ್ನೊಬ್ಬ ಅಧಿಕಾರಿ ಫೋನಿನಲ್ಲಿ ಮಾತನಾಡುವ ದೃಶ್ಯ. ತನಿಖೆ ನಡೆಯುವಾಗ ಹೀಗೆಲ್ಲ ಆಗುತ್ತದೆಯೇ ಅಂತ ಅನುಮಾನವಾಯ್ತು.

—ಭಾರತೀ ಗಂಗಾಧರ್, ಬೆಂಗಳೂರು

### ವಾರದ ಪತ್ರ



## ಕತ್ತರಿಯಿಂದ ರಸಭಂಗ

ಟೀವಿಗಳಲ್ಲಿ ಪ್ರಸಾರವಾಗುತ್ತಿರುವ ಸಿನಿಮಾ ಹಾಡುಗಳಿಗೆ ಕತ್ತರಿ ಪ್ರಯೋಗ ನಡೆಯುತ್ತಲೇ ಇದೆ. ಈಚೆಗೆ ಉದಯ ಮೂವೀಸ್‌ನಲ್ಲಿ ವಿಷ್ಣುವರ್ಧನ್ ಅಭಿನಯದ ‘ನಾಗರಹಾವು’ ಪ್ರಸಾರವಾಯಿತು. ಏಳು ಸುತ್ತಿನ ದುರ್ಗದ ಕೋಟೆಯನ್ನು ಶತ್ರುಗಳಿಂದ ರಕ್ಷಿಸಿದ ವೀರ ವನಿತೆ ಓಬವ್ವಳ ಕೆಚ್ಚೆದೆಯ ಹೋರಾಟದ ಚಿತ್ರಣವನ್ನು ನೀಡುವ ‘ಕನ್ನಡ ನಾಡಿನ ವೀರರಮಣಿಯ...’ ಹಾಡು ಪ್ರಸಾರವಾಗದೇ ಇದ್ದದ್ದು ನಿರಾಶೆ ತಂದಿತು. ಬರೀ ಹಾಡುಗಳಿಗೆ ಮಾತ್ರ ಕತ್ತರಿ ಪ್ರಯೋಗ ಮಾಡದೆ, ಕೆಲವೊಂದು ಕಥಾ ಸನ್ನಿವೇಶಗಳಿಗೂ ಈ ಪ್ರಯೋಗ ವಿಸ್ತರಿಸಿದುದು ವಿಷಾದದ ಸಂಗತಿ. ಸಂಬಂಧಪಟ್ಟವರು ಪೂರ್ಣ ಪ್ರಮಾಣದ ಚಲನಚಿತ್ರಗಳು ಪ್ರಸಾರವಾಗುವಂತೆ ನೋಡಿಕೊಳ್ಳಲಿ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಹಳಬರಿಂದ ‘ಬಿಗ್ ಬೋರ್’

ನೋಡಿದ್ದೇ ಮುಖ, ಆಡಿದ್ದೇ ಮಾತು, ಮಾಡಿದ್ದೇ ಆಟ ಎನ್ನುವಂತಾಗಿದೆ ಕಲರ್ಸ್ ಕನ್ನಡದ ‘ಬಿಗ್ ಬಾಸ್’. ಕಾರಣ ಕಳೆದ ಸೀಜನ್‌ನಲ್ಲಿ ಇದ್ದ ಅರ್ಧದಷ್ಟು ಆಟಗಾರರು ಇರುವುದರಿಂದ ಬಿಗ್ ಬಾಸ್ ಬಿಗ್ ಬೋರ್ ಆಗಿದೆ. ಹಿಂದಿನ ಸೀಜನ್ ಬಹುತೇಕರ ಮುಖವನ್ನು ನೋಡಿದ್ದೇವೆ. ಮತ್ತೆ ಅವರನ್ನೇ ನೋಡುವುದರಿಂದ ಹಳಸಿದ ಅನ್ನ ಊಟ ಮಾಡಿದಂತಾಗಿದೆ. ಮುಂದಿನ ಸೀಜನಿನಲ್ಲಾದರೂ ಎಲ್ಲರೂ ಹೊಸಬರೇ ಇರಲಿ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಬಿಗ್ ಬಾಸೊ ಬ್ಲೂ ಬಾಸೋ?

ಕಲರ್ಸ್ ಕನ್ನಡದ ‘ಬಿಗ್ ಬಾಸ್’ ರಿಯಾಲಿಟಿ ಶೋನಲ್ಲಿ ಸ್ಪರ್ಧಿಗಳಾದ ರಾಕೇಶ್ ಶೆಟ್ಟಿ, ಆರ್ಯವರ್ಧನ್, ಸಾನ್ಯಾ ಅಯ್ಯರ್ ಮಲಗಿದ್ದರು. ಶೆಟ್ಟಿ–ಸಾನ್ಯಾ ವರ್ತನೆ ಮುಜುಗರ ಹಾಗೂ ಅಸಹ್ಯ ಹುಟ್ಟಿಸುವಂತಿತ್ತು. ಅದನ್ನು ನೋಡಿದರೆ ಬಿಗ್ ಬಾಸೊ ಅಥವಾ ಬ್ಲೂ ಬಾಸು ವೀಕ್ಷಿಸುತ್ತಿದ್ದೇವೆಯೋ ಎನ್ನುವ ಅನುಮಾನ ಸುಳಿಯಿತು.

ಪ್ರಚಾರಕ್ಕಾಗಿ ಈ ರಿಯಾಲಿಟಿ ಶೋ ಎನ್ನುವುದಕ್ಕೆ ಅನುಮಾನವಿಲ್ಲ. ಎಲ್ಲದಕ್ಕೂ ಒಂದು ಇತಿಮಿತಿ ಇರುವುದು ಒಳ್ಳೆಯದು. ಮನೆಯಲ್ಲಿ ಕುಟುಂಬಸಮೇತರಾಗಿ ವೀಕ್ಷಿಸುತ್ತಾರೆ ಎನ್ನುವುದು ವಾಹಿನಿಯವರಿಗೆ ಗೊತ್ತಾಗಬೇಕು. ಸ್ಪರ್ಧಿಗಳು ಏನೇ ಮಾಡಿದರೂ ಪ್ರಸಾರ ಮಾಡುವವರಿಗೆ ಪ್ರಜ್ಞೆ ಬೇಡವೇ? ಆ ದೃಶ್ಯ ನೇರ ಪ್ರಸಾರದಲ್ಲಿ ಬಿತ್ತರವಾಗಿಲ್ಲ. ಎಡಿಟ್ ಮಾಡಿ ಅದನ್ನು ಫೋಕಸ್ ಮಾಡಿದ್ದರ ಹಿಂದಿನ ಮನೋಸ್ಥಿತಿ ಬಗ್ಗೆ ಏನು ಹೇಳುವುದು?

—ಎಸ್.ಸಿ. ರಮೇಶ್, ಮೈಸೂರು

## ಪ್ರಚಂಡ ಪುಟಾಣಿಗಳು

ಬರೀ ಪ್ರಚಂಡರನ್ನೇ ಸೆರೆ ಹಿಡಿಯುತ್ತಿದ್ದ ಕಲರ್ಸ್ ಕನ್ನಡದ ‘ಬಿಗ್ ಬಾಸ್’ ಕ್ಯಾಮೆರಾ ಕಣ್ಣಿನಲ್ಲಿ ಪ್ರಚಂಡ ಪುಟಾಣಿಗಳನ್ನು ನೋಡಿ ಖುಷಿಯಾಯ್ತು. ಮಕ್ಕಳ ಗೌಜು–ಗಲಾಟೆ, ಹಾಡು–ಕುಣಿತ, ತುಂಟಾಟ ಎಲ್ಲವೂ ನೋಡುಗರ ಮುಖದಲ್ಲಿ ನಗೆ ಮೂಡಿಸಿದವು.

ಸ್ಪರ್ಧಿಗಳು ಕೂಡಾ ಯಾವುದೇ ಲೆಕ್ಕಾಚಾರ, ತಂತ್ರಗಳಿಲ್ಲದೆ ಮಕ್ಕಳೊಡನೆ ಮಕ್ಕಳಾಗಿ ಮನೆಯ ಮೆರುಗನ್ನು ಹೆಚ್ಚಿಸಿದರು. ಮರಿ ಪ್ರಚಂಡರು ಮನಸ್ಸಿನೊಳಗೇ ‘ಈ ಸ್ಪರ್ಧಿಗಳಿಗೆ ನಾವೇನು ಕಡಿಮೆ’ ಎಂಬಂತೆ ತಮ್ಮ ಝಲಕ್ ತೋರಿಸಿದ್ದು ಅದ್ಭುತವಾಗಿತ್ತು.

—ನಿಖಿತಾ ಜಿ., ಹೊಸನಗರ